ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಹೌದು

ಆ) ಹೌದು

ಇ) ನೇರ ನೇಮಕಾತಿ ಮೂಲಕ ಒಟ್ಟು 4,499 ಸಿವಿಲ್ ಪೊಲೀಸ್ ಪೇದೆಗಳನ್ನು 1994ರ ನಂತರ ತುಂಬಲಾಗಿದೆ.

ಈ) ಸಿ.ಎ.ಆರ್ ಮತ್ತು ಡಿ.ಎ.ಆರ್.ನಲ್ಲಿರುವ ಅಭ್ಯರ್ಥಿಗಳಿಗಾಗಿ ಒಟ್ಟು 355 ಹುದ್ದೆಗಳನ್ನು ಮೀಸಲಿಡಲಾಗಿದೆ.

ಸ್ವಾತಂತ್ರ ಹೋರಾಟಗಾರರಿಗೆ ಮಾಸಾಶನ.

972(1346) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ವಿಮೋಚನೆಗೆ ಹೋರಾಟ ಮಾಡಿದ ಸಂತ್ರಸ್ತರಿಗೆ ಮಾಸಾಶನ ಕೊಡುತ್ತಿದ್ದುದು ನಿಜವೆ.

ಆ) ಹಾಗಿದ್ದಲ್ಲಿ ಅದನ್ನು ಈಗ ನಿಲ್ಲಿಸಲು ಕಾರಣವೇನು.

ಇ) ಇದನ್ನು ಪುನರ್ ಪರಿಶೀಲಿಸಿ ಕೊಡಲು ನಿರ್ಧಾರ ತೆಗೆದುಕೊಳ್ಳಲಾಗುವುದೆ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಹೌದು

ಆ) ಗೋವಾ ಗೌರವಧನ ಮಂಜೂರಾತಿ ಯೋಜನೆಯು ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ : 19-4-95 ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರವು ಹಿಂತೆಗೆದುಕೊಂಡಿದೆ.

ಇ) ಇಲ್ಲ

ತುಂಗಾ ಮೇಲ್ದಂಡೆ ಯೋಜನೆ.

974(1468) ಶ್ರೀ ಕುನಾನೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಂಗಾ ಮೇಲ್ದಂಡೆ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಯಿತು?

2. ಸದರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಆ ಬಗ್ಗೆ ಈವರೆಗೆ ಮಾಡಿದ ವೆಚ್ಚ ಎಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

ಅ) 1991ರಲ್ಲಿ ಪ್ರಾರಂಭಿಸಲಾಯಿತು.

ಆ) ಸದರಿ ಯೋಜನೆಯ ಅಂದಾಜು ವೆಚ್ಚ ಮೊತ್ತ ರೂ.27141 ಲಕ್ಷಗಳು. ಇಲ್ಲಿಯವರೆಗೆ (2/99ರಅಂತ್ಯದವರೆಗೆ) ಭರಿಸಲಾದ ವೆಚ್ಚ ರೂ.2961.18 ಲಕ್ಷಗಳು.

ವರಾಹಿ ಮೂಲ ಯೋಜನೆಯ ಅಂದಾಜು.

976(1472) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವರಾಹಿ ಮೂಲ ಯೋಜನೆಯ ಡ್ಯಾಮಿನ ಅಂದಾಜು ಪಟ್ಟಿ ತಯಾರಿಸಲಾಗುದೆಯೇ?

2. ಹಾಗಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

3. ವರಾಹಿ ಮೂಲ ಯೋಜನೆಯ ಡ್ಯಾಮಿನ ಟೆಂಡರ್ ಯಾವಾಗ ಕರೆಯಲಾಗುವುದು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

1. ತಯಾರಿಸಲಾಗಿದೆ. Estimate has been prepared

2. 1992-93ನೇ ಸಾಲಿನ ದರಪಟ್ಟಿಯಂತೆ ರೂ. 122.50 ಕೋಟಿಗಳು
Rs. 122.50 Crores based on 1992-93 S.R.

3. ಅರಣ್ಯ ಭೂಮಿ ಬಿಡುಗಡೆ ಪ್ರಸ್ತಾವನೆಗೆ ಕೇಂದ್ರ ಪರಿಸರ ಮಂತ್ರಾಲಯದಿಂದ ಅನುಮೋದನೆ ದೊರೆತ ನಂತರ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

After the proposal of Forest Clearance by the Ministry of Environment & Forest is approved, action will be taken to start the work.

ವರಾಹಿ ಯೋಜನೆಗೆ ಭೂಸ್ವಾದೀನ ಮತ್ತು ನೀಡಿದ ಪರಿಹಾರ.

977(1473) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವರಾಹಿ ಯೋಜನೆಯಡಿ ಭೂಸ್ವಾದೀನ ಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು (ಪರಿಹಾರದ ವಿವರ ತಿಳಿಸಲಾಗುವುದು)?